# ಕರ್ನಾಟಕ ವಿಧಾನ ಪರಿಷತ್

| | | | |
|---|---|---|---|
| 01. | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 851 |
| 02. | ಮಾನ್ಯ ಸದಸ್ಯರ ಹೆಸರು | : | ಶ್ರೀ. ರಘುನಾಥ ಮಲ್ಕಾಪುರೆ<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| 03. | ಉತ್ತರಿಸುವ ದಿನಾಂಕ | : | 22-02-2024 |
| 04. | ಉತ್ತರಿಸುವ ಸಚಿವರು. | : | ಗೃಹ ಸಚಿವರು. |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಬೀದರ್ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ರೈತರ ಜಮೀನಿನಲ್ಲಿರುವ ಕೊಳವೆ ಬಾವಿಗಳ/ನದಿಗಳ ಅಳವಡಿಸಿದ ಮೋಟಾರ್ ಮತ್ತು ಕೇಬಲ್ ವೈರ್ ಪೈಪ್ ಹಾಗೂ ಜಮೀನಿನ ಸುತ್ತಲು ಅಳವಡಿಸಿದ ಕಬ್ಬಿಣದ ಎಂಗಲ್ಸ್ ಪೋಲ್‌ಗಳು ನಾಪತ್ತೆಯಾಗಿರುವ ಪ್ರಕರಣಗಳೆಷ್ಟು; (ಕಳ್ಳತನ ನಡೆದಿರುವ ಪ್ರಕರಣದ ದಿನಾಂಕದೊಂದಿಗೆ ಪೊಲೀಸ್ ಠಾಣಾವಾರು, ತಾಲ್ಲುಕುವಾರು ಸಂಪೂರ್ಣ ಮಾಹಿತಿ ನಿಡುವುದು)</td><td>ಬೀದರ್ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ರೈತರ ಜಮೀನಿನಲ್ಲಿರುವ ಕೊಳವೆ ಬಾವಿಗಳ/ನದಿಗಳಿಗೆ ಅಳವಡಿಸಿದ ಮೋಟಾರ್ ಮತ್ತು ಕೇಬಲ್ ವೈರ್ ಪೈಪ್ ಹಾಗೂ ಜಮೀನಿನ ಸುತ್ತಲು ಅಳವಡಿಸಿದ ಕಬ್ಬಿಣದ ಎಂಗಲ್ಸ್ ಪೋಲ್‌ಗಳ ಕಳುವಿಗೆ ಸಂಬಂಧಿಸಿದಂತೆ ದಾಖಲಾದ ಪ್ರಕರಣಗಳ ಸಂಖ್ಯೆ ಈ ಕೆಳಕಂಡಂತಿದೆ.
<table>
<tr><th>ವರ್ಷ</th><th>ದಾಖಲಾದ ಪ್ರಕರಣಗಳ ಸಂಖ್ಯೆ</th></tr>
<tr><td>2021</td><td>8</td></tr>
<tr><td>2022</td><td>24</td></tr>
<tr><td>2023</td><td>37</td></tr>
<tr><td>2024</td><td>2</td></tr>
</table>
ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.</td></tr>
<tr><td>ಆ</td><td>ಪತ್ತೆಯಾದ ಮತ್ತು ಪತ್ತೆಯಾಗದ ಪ್ರಕರಣಗಳು ಎಷ್ಟು; (ಕಾರಣಗಳೊಂದಿಗೆ ವಿವರ ನೀಡುವುದು)</td><td>ಪತ್ತೆಯಾದ ಮತ್ತು ಪತ್ತೆಯಾಗದ ಪ್ರಕರಣಗಳು ಈ ಕೆಳಕಂಡಂತಿವೆ.
<table>
<tr><th>ವರ್ಷ</th><th>ಪತ್ತೆಯಾದ ಪ್ರಕರಣಗಳ ಸಂಖ್ಯೆ</th><th>ಪತ್ತೆಯಾಗದ ಪ್ರಕರಣಗಳು</th></tr>
<tr><td>2021</td><td>4</td><td>4</td></tr>
<tr><td>2022</td><td>13</td><td>10</td></tr>
<tr><td>2023</td><td>21</td><td>3</td></tr>
<tr><td>2024</td><td>1</td><td>0</td></tr>
</table>
<u>ಪತ್ತೆಯಾಗದೆ ಇರಲು ಕಾರಣಗಳು</u><br>
1) ನಾಪತ್ತೆಯಾದ ಪ್ರಕರಣಗಳನ್ನು ಪತ್ತೆ ಮಾಡಲು ರೈತರು ಬಹಳಷ್ಟು ಪ್ರಕರಣಗಳಲ್ಲಿ ಕಳ್ಳತನವಾಗಿರುವ ಮೋಟಾರು ಪಂಪಸೆಟ್‌ಗಳ ಕಂಪನಿ, ಮಾದರಿ, ಗುರುತುಗಳು, ಕ್ರಮ ಸಂಖ್ಯೆ ಇತ್ಯಾದಿ ಕುರಿತಾದ ದಾಖಲಾತಿಗಳನ್ನು ಇಟ್ಟುಕೊಂಡಿರುವುದಿಲ್ಲ.</td></tr>
</table>

| | | |
|---|---|---|
| | | 2) ಜಿಲ್ಲೆಯಲ್ಲಿ ಮಾಂಜ್ರಾ ನದಿ ಮತ್ತು ಕಾರಂಜಾ ಕಾಲುವೆಗಳಿಗೆ ರೈತರು ತಮ್ಮ ಮೋಟಾರ್ ಪಂಪ್‌ಸೆಟ್‌ಗಳನ್ನು ನದಿ ದಡಗಳಲ್ಲಿ ಖಿಲ್ಲಾ ಜಾಗೆಯಲ್ಲಿ ಅಳವಡಿಸಿದ್ದು ಅದಕ್ಕೆ ಯಾವುದೇ ಸೂಕ್ತವಾದ ಭದ್ರತೆ (ಕೋಣೆ) ಮಾಡಿಕೊಂಡಿರುವುದಿಲ್ಲ ಹಾಗೂ ಸಿ.ಸಿ. ಟಿ.ವಿ / ಕಾವಲುಗಾರರ ಸೌಲಭ್ಯವನ್ನು ಅಳವಡಿಸಿಕೊಂಡಿರುವುದಿಲ್ಲ ಇದರಿಂದ ಪತ್ತೆ ಮಾಡಲು ಕಷ್ಟಸಾಧ್ಯವಾಗುತ್ತಿದೆ. |
| ಇ | ನಾಪತ್ತೆಯಾದ ಪ್ರಕರಣಗಳಲ್ಲಿ ಹೆಚ್ಚು ಹೆಚ್ಚಾಗಿ ನದಿಗೆ ಅಳವಡಿಸಿದ ಮೋಟಾರು ಕೇಬಲ್/ಪೈಪ್‌ಗಳು ವರದಿಯಾಗಿರುವುದನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ಸ್ಪಷ್ಟ ಮಾಹಿತಿ ಒದಗಿಸುವುದು) | <u>ಕೈಗೊಂಡ ಕ್ರಮಗಳು</u><br><br>1. ಬೀದರ ಜಿಲ್ಲೆಯಲ್ಲಿ ಕಾರಂಜಾ ನದಿಯು 130 ಕಿ.ಮೀ. ಮತ್ತು ಮಾಂಜ್ರಾ ನದಿ 52 ಕಿ.ಮೀ. ಹರಡಿಕೊಂಡಿದ್ದು ರೈತರಿಗೆ ತಮ್ಮ ತಮ್ಮ ಮೋಟಾರ್ ಪಂಪ್‌ಸೆಟ್‌ಗಳನ್ನು ಸುರಕ್ಷಿತವಾಗಿಟ್ಟುಕೊಳ್ಳಲು ಸಿ.ಸಿ.ಟಿ.ವಿ/ಕಾವಲುಗಾರರ ಸೌಲಭ್ಯವನ್ನು ಅಳವಡಿಸಿಕೊಳ್ಳುವಂತೆ ತಿಳುವಳಿಕೆ ನೀಡಲಾಗಿರುತ್ತದೆ.<br><br>2. ಹಗಲು ಮತ್ತು ರಾತ್ರಿ ಗಸ್ತಿನಲ್ಲಿ ಈ ಹಿಂದೆ ಮೋಟಾರ್ ಪಂಪ್‌ಸೆಟ್ ಕಳ್ಳತನದಲ್ಲಿ ಭಾಗಿಯಾಗಿರುವ ಎಂ.ಓ.ಬಿ. ಕ್ರಿಮಿನಲ್‌ಗಳನ್ನು ಆಗಾಗ್ಗೆ ಪರಿಶೀಲನೆ ಮಾಡುತ್ತಿದ್ದೇವೆ. ಮೋಟಾರ್ ಪಂಪ್‌ಸೆಟ್‌ಗಳು ಖರೀದಿಸಿದ ದಾಖಲೆಗಳನ್ನು ಇಟ್ಟುಕೊಳ್ಳುವಂತೆ ರೈತರಿಗೆ ಅರಿವು ಮೂಡಿಸಲಾಗುತ್ತಿದೆ.<br><br>3. ಗುಜರಿ ಅಂಗಡಿಯವರಿಗೆ ರೈತರಲ್ಲದ ವ್ಯಕ್ತಿಗಳಿಂದ ಮೋಟಾರ್ ಪಂಪ್‌ಸೆಟ್‌ಗಳು ಗುಜರಿಯಲ್ಲಿ ಖರೀದಿಸದಂತೆ ಎಚ್ಚರಿಕೆ ನೀಡಲಾಗಿರುತ್ತದೆ ಹಾಗೂ ಕಳ್ಳತನವಾದಂತಹ ಮೋಟಾರ್ ಪಂಪ್‌ಸೆಟ್‌ಗಳನ್ನು ಮಾರಾಟ ಮಾಡುತ್ತಿರುವ ಬಗ್ಗೆ ಅನುಮಾನ ಬಂದಲ್ಲಿ ಕೂಡಲೇ ಮಾಹಿತಿಯನ್ನು ಪೊಲೀಸ್ ಠಾಣೆಗೆ ನೀಡುವಂತೆ ತಿಳಿಸಲಾಗಿದೆ. |

HD 9 PCQ 2024

ಡಾ: ~~ಜಿ.~~ಪರಮೇಶ್ವರ
(ಗೃಹ ಸಚಿವರು)

# ಅನುಬಂಧ

ಬೀದರ್ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ರೈತರ ಜಮೀನಿನಲ್ಲಿರುವ ಕೊಳವೆ ಬಾವಿಗಳ/ನದಿಗಳಿಗೆ ಅಳವಡಿಸಿದ ಮೋಟಾರ್ ಮತ್ತು ಕೇಬಲ್ ವೈರ್ ಪೈಪ್ ಹಾಗೂ ಜಮೀನಿನ ಸುತ್ತಲು ಅಳವಡಿಸಿದ ಕಬ್ಬಿಣದ ಎಂಗಲ್ಸ್ ಪೋಲ್‌ಗಳ ಕಳುವಿಗೆ ಸಂಬಂಧಿಸಿದಂತೆ ದಾಖಲಾದ ಪ್ರಕರಣಗಳ ತಾಲ್ಲೂಕುವಾರು ವಿವರ ಈ ಕೆಳಕಂಡಂತಿದೆ.

| ಕ್ರ.ಸಂ. | ತಾಲ್ಲೂಕಿನ ಹೆಸರು | 2021 | 2022 | 2023 | 2024 (ಜನವರಿ ವರೆಗೆ) |
|---|---|---|---|---|---|
| 1 | ಬೀದರ್ | – | – | 3 | – |
| 2 | ಭಾಲ್ಕಿ | 7 | 12 | 11 | – |
| 3 | ಹುಲಸೂರ | – | 3 | – | – |
| 4 | ಔರಾದ್ | 1 | 3 | 8 | – |
| 5 | ಕಮಲನಗರ | – | 1 | 2 | 1 |
| 6 | ಚಿಟಗುಪ್ಪ | – | 1 | 4 | – |
| 7 | ಬಸವಕಲ್ಯಾಣ | – | 3 | 7 | 1 |
| 8 | ಹುಮನಾಬಾದ್ | – | 1 | 2 | – |

**ಠಾಣಾವಾರು ಹಾಗೂ ಪ್ರಕರಣವಾರು ವಿವರ**

| ಕ್ರ ಸಂ. | ಪೊಲೀಸ್ ಠಾಣೆ | ಅಪರಾಧ ಸಂಖ್ಯೆ ಮತ್ತು ಕಲಂ | ಘಟನೆ ದಿನಾಂಕ | ವರದಿ ದಿನಾಂಕ | ಕಳುವಾದ ಸ್ವತ್ತಿನ ವಿವರ ಮತ್ತು ಮೌಲ್ಯ | ಪ್ರಕರಣದ ಪ್ರಸ್ತುತ ಹಂತ |
|---|---|---|---|---|---|---|
| | | | ಬೀದರ ತಾಲ್ಲೂಕ | | | |
| 1. | ಜನವಾಡ | ಅಪರಾದ ಸಂಖ್ಯೆ 105/2023 ಕಲಂ 379 ಐಪಿಸಿ | ದಿ: 28/08/2023 ರಿಂದ 29/08/2023 ರ ಮಧ್ಯದ ಅವಧಿಯಲ್ಲಿ | ದಿ: 05/09/2023 | 1) ವಿಗಾರ್ಡ ಕಂಪನಿಯ 7.5 ಹೆಚ್‌ಪಿ ಮೋಟಾರ್ ಅ.ಕಿ 30,000/–<br>2) ವಿಗಾರ್ಡ ಕಂಪನಿಯ ಮೋಟಾರ್ ಪಂಪಸೆಟ್ ಅ.ಕಿ 12000/–<br>3) LTK 3 ಸ್ಟಾಟರ್‌ಗಳು ಅ.ಕಿ 6600/–<br>4) 1 ಸಾವಿರ ಪಂಪ್‌ಸೆಟ್ ಅ.ಕಿ 3000/–<br>5) 40 ಫೀಟ್ ಕೇಬಲ್ ಅ.ಕಿ 1200/–<br>ಒಟ್ಟು 52800/– | ತನಿಖೆಯಲ್ಲಿರುತ್ತದೆ. |
| 2. | ಬಗದಲ | 42/2023 ಕಲಂ– 379 ಐಪಿಸಿ | ದಿನಾಂಕ–13–06–2023 ರಂದು ರಾತ್ರಿ | ದಿನಾಂಕ–18–06–2024 ರಂದು | ಕೇಬಲ್ ವೈರ್–330 ಮೀಟರ್ ಅ.ಕಿ– | ತನಿಖೆಯಲ್ಲಿರುತ್ತದೆ. |